# ಇದು ಬರಿ ಬೆಳಕಲ್ಲೋ ಅಣ್ಣಾ!



ಮೇ 16 ಲೇಸರ್ ಬೆಳಕಿನ ಜನ್ಮದಿನ. 60 ವರ್ಷಗಳ ಹಿಂದೆ ಅಮೆರಿಕದ ಭೌತಶಾಸ್ತ್ರಜ್ಞ ಥಿಯೊಡೋರ್ ಹರಾಲ್ಡ್ ಮೈಮನ್ ತನ್ನ ಲ್ಯಾಬಿನಲ್ಲಿ ಮೊದಲ ಬಾರಿಗೆ ಲೇಸರ್ ಬೆಳಕಿನ ಕಿರಣ ಹೊಮ್ಮಿಸಿ ಯಶಸ್ವಿಯಾದ ಸಂಶೋಧನೆಯ ನೆನಪಿಗೆ ಮತ್ತು ಸಾಮಾನ್ಯ ಬೆಳಕು ನಮ್ಮ ನಿತ್ಯದ ಬದುಕಿನ ಮೇಲೆ ಬೀರುತ್ತಿರುವ ಪ್ರಭಾವ, ಅನುಕೂಲ, ಪರಿಣಾಮಗಳನ್ನು ಸ್ಮರಿಸಲು 16ನ್ನು 'ಅಂತರರಾಷ್ಟ್ರೀಯ ಬೆಳಕಿನ ದಿನ'ವನ್ನಾಗಿ ಆಚರಿಸಲಾಗುತ್ತದೆ.

**■ ಗುರುರಾಜ್ ಎಸ್. ದಾವಣಗೆರೆ**

ವರಕವಿ ಬೇಂದ್ರೆ ತಮ್ಮ 'ಬೆಳಗು' ಪದ್ಯದಲ್ಲಿ ಸೂರ್ಯೋದಯದ ವೈಭವವನ್ನು ವರ್ಣಿಸುತ್ತ ಕೊನೆಯಲ್ಲಿ 'ಶಾಂತಿರಸವೆ ಪ್ರೀತಿಯಿಂದ ಮೈದೋರಿತಣ್ಣಾ, ಇದು ಬರೀ ಬೆಳಗಲ್ಲೋ ಅಣ್ಣಾ' ಎಂದು ಬೆಳಕನ್ನು ಶಾಂತಿರಸಕ್ಕೆ ಹೋಲಿಸಿದ್ದರು. ಬಿ.ಎಂ.ಶ್ರೀ. ಅವರು ಮಬ್ಬು ಮುಸುಕಿದ ದಾರಿಯ ನಡೆಗೆ ಆಸರೆಯಾಗಲು ಬರುವ ಬೆಳಕನ್ನು 'ಕರುಣಾಳು' ಎಂದಿದ್ದರು. ಸಂತ ರಾಮದಾಸರು ವಿವೇಕಯುಕ್ತ ಜ್ಞಾನವನ್ನು ಬೆಳಕಿಗೆ ಹೋಲಿಸಿದ್ದರು. ದಾರ್ಶನಿಕ ಪ್ಲೇಟೊ ಬೆಳಕೆಂಬುದು ಭಗವಂತನ ನೆರಳು ಎಂದಿದ್ದ. ವಿಜ್ಞಾನಿ ನಿ ಮ್ಯಾಕ್ಸ್ ಪ್ಲಾಂಕ್ ಬೆಳಕು ಕಣ ಮತ್ತು ಅಲೆ ಎರಡರ ಸಮ್ಮಿಲನ ಎಂದು ನಿರೂಪಿಸಿದ್ದರು. ಅತಿಯಾದ ದ್ರವ್ಯ ರಾಶಿ ಇರುವ ವಸ್ತುವಿನ ಬಳಿ ಹಾಯುವ ಬೆಳಕಿನ ಕಿರಣ ಬಾಗುತ್ತದೆ ಎಂದು ಸಾಧಿಸಿದ ಐನ್‌ಸ್ಟೈನ್ ಫೋಟೊ ಎಲೆಕ್ಟ್ರಿಕ್ ಎಫೆಕ್ಟ್‌ಗಾಗಿ ಮತ್ತು ನಮ್ಮವರೇ ಆದ ಸರ್ ಸಿ.ವಿ. ರಾಮನ್ ಬೆಳಕಿನ ಚದುರುವಿಕೆಯ ಕುರಿತು ನಡೆಸಿದ ರಾಮನ್ ಎಫೆಕ್ಟ್ ಪ್ರಯೋಗಕ್ಕಾಗಿ ನೊಬೆಲ್ ಬಹುಮಾನಗಳನ್ನೇ ಪಡೆದರು. ಕಳೆದ ತಿಂಗಳು ಸಾಮೂಹಿಕವಾಗಿ ದೇಶಾದ್ಯಂತ ಹಚ್ಚಿದ ದೀಪದ ಬೆಳಕಿನಿಂದ ಕೊರೊನಾ ಮಾರಿಯನ್ನು ಓಡಿಸುವ ಪ್ರಯತ್ನವೂ ನಡೆಯಿತು.

ಬೆಳಕಿನ ಕುರಿತು ಇಷ್ಟೊಂದು ಪೀಠಿಕೆ ಏಕೆ ಎನ್ನುತ್ತೀರಾ? ಕಾರಣವಿದೆ. ಮೇ 16 ಲೇಸರ್ ಬೆಳಕಿನ ಜನ್ಮದಿನ. ಅಂದಿಗೆ ಸರಿಯಾಗಿ 60 ವರ್ಷಗಳ ಹಿಂದೆ ಅಮೆರಿಕದ ಭೌತಶಾಸ್ತ್ರಜ್ಞ ಥಿಯೊಡೋರ್ ಹರಾಲ್ಡ್ ಮೈಮನ್ ತನ್ನ ಲ್ಯಾಬಿನಲ್ಲಿ ಮೊದಲ ಬಾರಿಗೆ ಲೇಸರ್ ಬೆಳಕಿನ ಕಿರಣ ಹೊಮ್ಮಿಸಿ ಯಶಸ್ವಿಯಾಗಿದ್ದ. ಆ ಸಂಶೋಧನೆಯ ನೆನಪಿಗೆ ಮತ್ತು ಸಾಮಾನ್ಯ ಬೆಳಕು ನಮ್ಮ ನಿತ್ಯದ ಬದುಕಿನ ಮೇಲೆ ಬೀರುತ್ತಿರುವ ಪ್ರಭಾವ, ಅನುಕೂಲ, ಪರಿಣಾಮಗಳನ್ನು ಸ್ಮರಿಸಲು ಯುನೆಸ್ಕೊ ನಿರ್ಣಯದಂತೆ ವಿಶ್ವದಾದ್ಯಂತ ಮೇ 16ನ್ನು 'ಅಂತರರಾಷ್ಟ್ರೀಯ ಬೆಳಕಿನ ದಿನ' ಎಂದು ಆಚರಿಸಲಾಗುತ್ತದೆ.

### ಬೆಳಕು ತೂರಿ ಬಂದ ದಾರಿ

ಭೂಮಿಯ ಮೇಲೆ ಮನುಷ್ಯ ಕಣ್ಣು ಬಿಟ್ಟಾಗಿನಿಂದಲೂ ಬೆಳಕಿನ ಸಂಪರ್ಕದಲ್ಲಿದ್ದಾನೆ. ಸುತ್ತಲಿನ ಜಗತ್ತನ್ನು ಕಾಣುವಂತೆ ಮಾಡಿ ನಮಗೆ ದೃಷ್ಟಿಯ ಅನುಭವ ನೀಡುವ ಪ್ರಕೃತಿಯ ಶಕ್ತಿಯನ್ನು ಬೆಳಕು ಎಂದು ಕರೆದು ಅದರ ಮೂಲ ಏನು! ಯಾವುದರಿಂದ ಮಾಡಲ್ಪಟ್ಟಿದೆ, ಎಲ್ಲಿಂದ ಬರುತ್ತದೆ? ವಸ್ತುವಿಷಯಗಳ ಗ್ರಹಿಕೆಗೆ ನೆರವಾಗುವುದರ ಜೊತೆಗೆ ಬೇರೆ ಏನಾದರೂ ಉಪಯೋಗಗಳಿವೆಯೇ ಎಂದು ನಿರಂತರವಾಗಿ ಪ್ರಯೋಗ ಮಾಡುತ್ತ ಮಾಡುತ್ತ ಸೂರ್ಯನೇ ಜಗದ ಬೆಳಕಿನ ಮೂಲ ಎಂದು ಕಂಡುಕೊಂಡ. ಮುಂದುವರೆದು ಬೆಳಕು ಫೋಟಾನ್ ಎಂಬ ಕಣಗಳಿಂದ ಕೂಡಿದ್ದು